COUNTERFEIT WING

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 17

ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 05-03-2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಶಕ್ತಿ ಯೋಜನೆಯಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಮಹಿಳೆಯರು ಪ್ರಯಾಣಿಸಿದ ಜಿಲ್ಲೆ ಯಾವುದು; (ವಿವರ ನೀಡುವುದು) | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಶಕ್ತಿ ಯೋಜನೆಯಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಮಹಿಳೆಯರು ಪ್ರಯಾಣಿಸಿದ ಜಿಲ್ಲೆಗಳ ವಿವರ (ಜೂನ್-2023 ರಿಂದ ಜನವರಿ-2025ರ ಅಂತ್ಯದವರೆಗೆ) ಕೆಳಕಂಡಂತಿದೆ:-<br><br>**ನಿಗಮ/ಸಂಸ್ಥೆ** — **ಜಿಲ್ಲೆ** — **ಮಹಿಳಾ ಪ್ರಯಾಣಿಕರ ಸಂಖ್ಯೆ**<br>ಕ.ರಾ.ರ.ಸಾ.ನಿಗಮ — ಕೊಡಗು — 9400000<br>ಬೆಂ.ಮ.ಸಾ.ಸಂಸ್ಥೆ — ಬೆಂ.ಗ್ರಾಮಾಂತರ — 45196204<br>ವಾ.ಕ.ರ.ಸಾ.ಸಂಸ್ಥೆ — ಗದಗ — 84655262<br>ಕ.ಕ.ರ.ಸಾ.ನಿಗಮ — ಯಾದಗಿರಿ — 38642583 |
| ಆ. | ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಇರುವ ಸರ್ಕಾರಿ ಬಸ್ಸುಗಳ ಸಂಖ್ಯೆ ಎಷ್ಟು; ಯಾವ ಯಾವ ಭಾಗಗಳಲ್ಲಿ ಸರ್ಕಾರಿ ಬಸ್ಸುಗಳನ್ನು ಓಡಿಸಲು ಅನುಮತಿ ಪಡೆದಿರುವುದಿಲ್ಲ; (ವಿವರ ನೀಡುವುದು) | ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಗಳೂರು ಮತ್ತು ಪುತ್ತೂರು ವಿಭಾಗಗಳು ಕಾರ್ಯ ನಿರ್ವಹಿಸುತ್ತಿವೆ. ಮಂಗಳೂರು ವಿಭಾಗದ ಘಟಕಗಳಿಂದ 533 ಅನುಸೂಚಿ/ಬಸ್ಸುಗಳು ಹಾಗೂ ಪುತ್ತೂರು ವಿಭಾಗದ ಘಟಕಗಳಿಂದ 371 ಅನುಸೂಚಿ/ಬಸ್ಸುಗಳು ಸೇರಿ ಒಟ್ಟು 904 ಅನುಸೂಚಿ/ಬಸ್ಸುಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಕರ್ನಾಟಕ ಸರ್ಕಾರದ ಶಕ್ತಿ ಯೋಜನೆ ಜಾರಿಗೆ ಬಂದ ನಂತರ ಸಾರ್ವಜನಿಕ ಪ್ರಯಾಣಿಕರಿಂದ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಕೋರಿ ಹೆಚ್ಚಿನ ಬೇಡಿಕೆಗಳು ಬಂದಿದ್ದು, ಸಂಬಂಧಿಸಿದ ಸಾರಿಗೆ ಪ್ರಾಧಿಕಾರದಿಂದ ಪಕ್ಕಾ/ತಾತ್ಕಾಲಿಕ ಪರವಾನಗಿಗಳನ್ನು ಪಡೆದು ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಯಾವುದೇ ಮಾರ್ಗದಲ್ಲಿ ನಿಗಮದ ವಾಹನಗಳನ್ನು ಅನುಮತಿಯಿಲ್ಲದೇ ಕಾರ್ಯಾಚರಿಸುತ್ತಿಲ್ಲ. |
| ಇ. | ಇಲ್ಲಿ ಬಸ್ಸುಗಳ ಸಂಖ್ಯೆ ತೀರಾ ಕಡಿಮೆ ಇದ್ದು, ಶಕ್ತಿ ಯೋಜನೆಗೆ ಪ್ರಯೋಜನ ಪಡೆಯಲು ಮಹಿಳೆಯರಿಂದ ದೂರುಗಳು ಬಂದಿದ್ದರೂ ಸಾರಿಗೆ ಇಲಾಖೆ ಯಾವುದೇ ಕ್ರಮಕೈಗೊಳ್ಳದಿರಲು | ಶಕ್ತಿ ಯೋಜನೆ ಜಾರಿಗೆ ಬಂದ ನಂತರ ಸದರಿ ಯೋಜನೆಯ ಸದುಪಯೋಗವನ್ನು ಪಡೆಯುವ ನಿಟ್ಟಿನಲ್ಲಿ ನಗರ/ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಸಾರಿಗೆ ಸೌಲಭ್ಯವನ್ನು ಕಲ್ಪಿಸುವಂತೆ ಕೋರಿ ಜನಪ್ರತಿನಿಧಿಗಳು/ಸಾರ್ವಜನಿಕ ಪ್ರಯಾಣಿಕರು/ ವಿದ್ಯಾರ್ಥಿಗಳಿಂದ ಬೇಡಿಕೆಗಳು ಸ್ವೀಕೃತವಾಗಿರುತ್ತವೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಕಾರಣಗಳೇನು; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಕೋರಿ ಒಟ್ಟು 303 ಮನವಿಗಳು ಸ್ವೀಕೃತವಾಗಿದ್ದು, 79 ಮನವಿಗಳನ್ನು ಪರಿಗಣಿಸಲಾಗಿದ್ದು, 224 ಬೇಡಿಕೆಗಳು ಬಾಕಿಯಿರುತ್ತವೆ. ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಕೋರಿ ಒಟ್ಟು 131 ಮನವಿಗಳು ಸ್ವೀಕೃತವಾಗಿರುತ್ತವೆ. 64 ಮನವಿಗಳನ್ನು ಪರಿಗಣಿಸಲಾಗಿದ್ದು, 67 ಬೇಡಿಕೆಗಳು ಬಾಕಿಯಿರುತ್ತವೆ.<br><br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಖಾಸಗಿ ವಲಯವಾಗಿದ್ದು, ನಿಗಮದ ಸಾರಿಗೆಗಳ ಕಾರ್ಯಾಚರಣೆಗೆ ಪರವಾನಗಿಗಳನ್ನು ಪಡೆಯುವುದು ಅತ್ಯವಶ್ಯಕವಾಗಿರುವುದರಿಂದ ಬೇಡಿಕೆಯಿರುವ ಮಾರ್ಗಗಳಿಗೆ ಪರವಾನಗಿ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರಲ್ಲಿ ಅರ್ಜಿ ಸಲ್ಲಿಸಲಾಗಿರುತ್ತದೆ.<br><br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ. ಪ್ರಸ್ತುತ ಚಾಲನಾ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಸದರಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಮತ್ತು ಪರವಾನಗಿಗಳು ಮಂಜೂರಾದ ನಂತರ ಬೇಡಿಕೆಯಿರುವ ಮಾರ್ಗಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು. |
| ಈ. | ಸ್ವಾತಂತ್ರ್ಯದ ನಂತರ ಈವರೆವಿಗೂ ಮಂಗಳೂರು-ಮೂಡಬಿದ್ರೆ, ಕಾರ್ಕಳಕ್ಕೆ ಸರ್ಕಾರಿ ಬಸ್ಸುಗಳನ್ನು ಬಿಡಿಸದೆ ಸುಮಾರು 60 ಕಿ.ಮೀ. ದೂರಕ್ಕೆ ದಿನಾ ಸಂಚರಿಸಲು ಮಹಿಳೆಯರಿಗೆ ಶಕ್ತಿ ಯೋಜನೆಯ ಪ್ರಯೋಜನ ಪಡೆಯಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | **<u>ಸಾರಿಗೆ ಮತ್ತು ರಸ್ತೆ ಸುರಕ್ಷತೆ</u>**<br><br>ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರಿಂದ ದಿನಾಂಕ:31-10-2017ರಂದು ಮಂಗಳೂರು-ಮೂಡಬಿದ್ರೆ ಮಾರ್ಗದಲ್ಲಿ 8 ಪರವಾನಿಗೆಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಮಂಜೂರಾತಿ ನೀಡಲಾಗಿರುತ್ತದೆ.<br><br>ಆದರೆ, ಸದರಿ ಮಂಜೂರಾತಿಯನ್ನು ಪ್ರಶ್ನಿಸಿ ಶ್ರೀ ಕೆ. ರಾಜವರ್ಮ ಬಲ್ಲಾಳ್ ಮತ್ತು ಇತರರು ಕರ್ನಾಟಕ ರಾಜ್ಯ ಸಾರಿಗೆ ಮೇಲ್ಮನವಿ ಪ್ರಾಧಿಕಾರದಲ್ಲಿ ಪರಿಷ್ಕರಣಾ ಅರ್ಜಿ ಸಂ: 164/2017, 165/2017, 166/2017, 167/2017, 168/2017, 169/2017, 170/2017 ಮತ್ತು 171/2017ರಲ್ಲಿ ಪ್ರಕರಣವನ್ನು ದಾಖಲಿಸಲಾಗಿದ್ದು, ಮಾನ್ಯ ನ್ಯಾಯಾಲಯವು ಸದರಿ ಪರಿಷ್ಕರಣಾ ಅರ್ಜಿಗಳ ಪ್ರಕರಣಗಳಿಗೆ ದಿನಾಂಕ:31-10-2017ರಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರು ಮಂಜೂರು ಮಾಡಿರುವ ಆದೇಶವನ್ನು ರದ್ದುಪಡಿಸಿ ಪ್ರಕರಣವನ್ನು ಪುನರ್ ಕಾನೂನಾತ್ಮಕವಾಗಿ ವಿಚಾರಣೆ ಮಾಡಿ ಆದೇಶ ಹೊರಡಿಸಲು ಸೂಚಿಸಲಾಗಿರುತ್ತದೆ.<br><br>ಅದರಂತೆ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯ ದಿನಾಂಕ:13-01-2022ರಂದು ಮಂಡಿಸಲಾಗಿದ್ದು, ಅಧ್ಯಕ್ಷರು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದವರು ಮಂಗಳೂರು-ಮೂಡಬಿದ್ರೆ-ಕಾರ್ಕಳ ಮಾರ್ಗದಲ್ಲಿ ನಿಗಮದ ಸಾರಿಗೆ ಬಸ್ಸುಗಳ ಟ್ರಿಪ್‌ಗಳ ಸಂಖ್ಯೆ 07ರ ಬದಲಾಗಿ 4 ಟ್ರಿಪ್‌ಗಳನ್ನು ಮೊಟಕುಗೊಳಿಸಿ ಪ್ರತಿ ಬಸ್ಸಿಗೆ 3 ಟ್ರಿಪ್‌ಗಳನ್ನು ಮಾತ್ರ ಹೊಸ ವೇಳಾಪಟ್ಟಿಯೊಂದಿಗೆ ಮಾರ್ಪಾಡಿಸಿ ಖಾಸಗಿ ಪ್ರವರ್ತಕರ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ವೇಳಾಪಟ್ಟಿಗೆ ತೊಂದರೆಯಾಗದಂತೆ ಬಸ್ಸುಗಳನ್ನು ಸಂಚರಿಸಲು ನಿರ್ಣಯಿಸಲಾಗಿರುತ್ತದೆ.<br><br>ಆದರೆ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯ ಮೇಲ್ಕಂಡ ನಿರ್ಣಯವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಸಾರಿಗೆ ಮೇಲ್ಮನವಿ ಪ್ರಾಧಿಕಾರದಲ್ಲಿ ಅಪೀಲು ಸಂ:157/2017 ಮತ್ತು ಇತರೆ ಪ್ರಕರಣವನ್ನು ದಾಖಲಿಸಲಾಗಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:15-02-2024ರಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ರವರ ಸಭೆಯ ದಿನಾಂಕ:13-01-2022ರಲ್ಲಿ ಕೈಗೊಂಡ ನಿರ್ಣಯವನ್ನು ಬದಿಗೊತ್ತಿಸಿ, ಪ್ರಕರಣವನ್ನು ಪ್ರಾಧಿಕಾರಕ್ಕೆ ಹಿಂದಿರುಗಿಸುತ್ತಾ ಪುನರ್ ಕಾನೂನಾತ್ಮಕವಾಗಿ ವಿಚಾರಣೆ ಮಾಡಿ 90 ದಿನಗಳೊಗಾಗಿ ಆದೇಶ ಹೊರಡಿಸಲು ಸೂಚಿಸಲಾಗಿರುತ್ತದೆ.<br><br>ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯ ದಿನಾಂಕ:05-11-2024ರಂದು ಮೇಲ್ಕಂಡ ವಿಷಯವನ್ನು ಮಂಡಿಸಲಾಗಿದ್ದು, ಮಂಗಳೂರು-ಮೂಡಬಿದ್ರೆ-ಕಾರ್ಕಳ ಮಾರ್ಗದಲ್ಲಿ 08 ಪರವಾನಿಗೆಗಳ ಅರ್ಜಿಯನ್ನು ಮಂಜೂರು ಮಾಡುವ ಬಗ್ಗೆ ಚರ್ಚಿಸಲಾಗಿದ್ದು, ಪ್ರಕರಣವು ಪ್ರಾಧಿಕಾರದ ನಿರ್ಣಯಕ್ಕೆ ಬಾಕಿ ಇರುತ್ತದೆ.<br><br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**<br><br>ಮಂಗಳೂರು-ಮೂಡಬಿದ್ರೆ-ಕಾರ್ಕಳ ವಯಾ ಕೈಕಂಬ-ಗುರುಪುರ ಮಾರ್ಗದಲ್ಲಿ 04 ವಾಹನಗಳಿಗೆ ತಾತ್ಕಾಲಿಕ ಪರವಾನಗಿ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ರವರಲ್ಲಿ ದಿನಾಂಕ:21-07-2023ರಂದು ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ದಿನಾಂಕ:10-12-2024ರಂದು 4 ತಾತ್ಕಾಲಿಕ ಪರವಾನಗಿಗಳು ಮಂಜೂರಾಗಿರುತ್ತದೆ. ಸದರಿ ತಾತ್ಕಾಲಿಕ ಪರವಾನಗಿಗಳನ್ನು ಉಪಯೋಗಿಸಿಕೊಂಡು ದಿನಾಂಕ:13-12-2024 ರಿಂದ ಮಂಗಳೂರು ವಿಭಾಗ ವತಿಯಿಂದ 4 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಸಾರ್ವಜನಿಕ ಪ್ರಯಾಣಿಕರು ಸದರಿ ಸಾರಿಗೆಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. |
| ಉ. | ಪ್ರತಿದಿನ ಸಾವಿರಾರು ಮಹಿಳೆಯರು, ಮಕ್ಕಳು, ವೃದ್ಧರು ಮತ್ತು ಹಿರಿಯ ನಾಗರೀಕರು ಸಂಚರಿಸುತ್ತಿರುವ ಈ ಮಾರ್ಗದಲ್ಲಿ ಕೇವಲ 04 ಬಸ್ಸುಗಳು ಮಾತ್ರ ಓಡಿಸಲಾಗುತ್ತಿದ್ದು, ಈ ಭಾಗದ ಜನರ ಬೇಡಿಕೆಯನ್ನು ಇಲಾಖೆ ನಿರ್ಲಕ್ಷಿಸಲು ಕಾರಣವೇನು; (ವಿವರ ನೀಡುವುದು) ಈ ಬಗ್ಗೆ ಸರ್ಕಾರದ ಮುಂದಿರುವ | ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯ ದಿನಾಂಕ:05-11-2024ರಂದು ಸದರಿ ವಿಷಯವನ್ನು ಮಂಡಿಸಲಾಗಿದ್ದು, ಮಂಗಳೂರು-ಮೂಡಬಿದ್ರೆ-ಕಾರ್ಕಳ ಮಾರ್ಗದಲ್ಲಿ 08 ಪರವಾನಿಗೆಗಳ ಅರ್ಜಿಯನ್ನು ಮಂಜೂರು ಮಾಡುವ ಬಗ್ಗೆ ಚರ್ಚಿಸಲಾಗಿದ್ದು, ಪ್ರಕರಣವು ಪ್ರಾಧಿಕಾರದ ನಿರ್ಣಯಕ್ಕೆ ಬಾಕಿ ಇರುತ್ತದೆ.<br><br>ಆದರೂ, ಪ್ರತಿದಿನ ಸಾವಿರಾರು ಮಹಿಳೆಯರು, ಮಕ್ಕಳು, ವೃದ್ಧರು ಮತ್ತು ಹಿರಿಯ ನಾಗರೀಕರು ಸಂಚರಿಸುತ್ತಿರುವ ಈ ಭಾಗದ ಜನರ ಬೇಡಿಕೆಯನ್ವಯ ಸಾರಿಗೆ ನಿಗಮದವರು ಸಲ್ಲಿಸಲಾದ 4 ತಾತ್ಕಾಲಿಕ ರಹದಾರಿ ಮಂಗಳೂರು-ಮೂಡಬಿದ್ರೆ-ಕಾರ್ಕಳ ವೈಯಾ ಕೈಕಂಬ-ಗುರುಪುರ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಯೋಜನೆಗಳು ಯಾವುವು (ವಿವರ ನೀಡುವುದು) | ಮಾರ್ಗಗಳಿಗೆ ಪ್ರಾಧಿಕಾರದಿಂದ ಮಂಜೂರು ಮಾಡಲಾಗಿರುತ್ತದೆ.<br><br>ನಿಗಮಕ್ಕೆ ಪರವಾನಗಿಗಳು ಮಂಜೂರಾದ ನಂತರ ಸದರಿ ಮಾರ್ಗದಲ್ಲಿ ಹೆಚ್ಚಿನ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲು ಹಂತಹಂತವಾಗಿ ಕ್ರಮ ಕೈಗೊಳ್ಳಲಾಗುವುದು. |
| ಊ. | ಮಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಜನಸಂಖ್ಯೆಯು 10 ಲಕ್ಷಕ್ಕೂ ಮೀರಿದ್ದರೂ ಬಸ್ಸುಗಳನ್ನು ಓಡಿಸಲು ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು; (ವಿವರ ನೀಡುವುದು) | **ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ**<br><br>ಮಾನ್ಯ ಜಿಲ್ಲಾಧಿಕಾರಿಯವರ ಆದೇಶ ಸಂಖ್ಯೆ: ಆರ್‌ಟಿಎ/ ಸಿಆರ್/ 65/ 2013-14/ 112800, ದಿನಾಂಕ:11-09-2013ರನ್ವಯ ಸರ್ಕಾರಿ ಮತ್ತು ಖಾಸಗಿ ಬಸ್ಸುಗಳಿಗೆ ದಿನಾಂಕ:05-01-1991 ಮತ್ತು 06-04-1993ಗಳಲ್ಲಿ ನೀಡಲಾಗಿರುವ ನಗರ ಸಾರಿಗೆ ಹಾಗೂ ಗ್ರಾಮಾಂತರ ಬಸ್ಸುಗಳಿಗೆ ಮಾತ್ರ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಸಂಚರಿಸಲು ಅನುಮತಿ ನೀಡಲಾಗಿರುತ್ತದೆ.<br><br>ಅಲ್ಲದೆ, ಮೋಟಾರು ವಾಹನ ಕಾಯ್ದೆ 1988ರ, ಕಲಂ 117 ಮತ್ತು ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 228 ಎ(6) ರನ್ವಯ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯೊಳಗೆ ಸಂಚರಿಸುವ ಇತರೆ ಬಸ್ಸುಗಳಿಗೆ ಈ ಕೆಳಕಂಡ ನಿಲುಗಡೆ ಸ್ಥಳಗಳಲ್ಲಿ ವಾಹನಗಳನ್ನು ನಿಲುಗಡೆಗೊಳಿಸಲು ಸಹ ಆದೇಶಿಸಲಾಗಿದೆ. ಪ್ರತಿಯನ್ನು **'ಅನುಬಂಧ'** ದಲ್ಲಿ ನೀಡಲಾಗಿದೆ.<br><br>1. ಮರವೂರು, ಬೋಂದೇಲ್, ಕೆ.ಪಿ.ಟಿ ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳ ಕೆ.ಪಿ.ಡಿ. ತನಕ ಬಂದು ಕೆ.ಪಿ.ಟಿ ಸಮೀಪ ನಿಲುಗಡೆಯಾಗುವುದು.<br>2. ಗುರುಪುರ, ಕುಲಶೇಖರ ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಮಲ್ಲಿಕಟ್ಟೆ ತನಕ ಬಂದು ಮಲ್ಲಿಕಟ್ಟೆ ಸ್ಥಾನದಲ್ಲಿ ನಿಲುಗಡೆಯಾಗುವುದು.<br>3. ತಲಪಾಡಿ, ಉಳ್ಳಾಲ, ಕೋಣಾಜೆ, ತೊಕ್ಕೊಟ್ಟು, ಪಡೀಲ್ ಮತ್ತು ನಾಗುರಿ ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಕಂಕನಾಡಿ ತನಕ ಬಂದು ಕಂಕನಾಡಿಯಲ್ಲಿ ನಿಲುಗಡೆಯಾಗುವುದು.<br>4. ಸುರತ್ಕಲ್, ಕೂಳೂರು, ಕೊಟ್ಟಾರ, ಉರ್ವಸ್ಟೋರ್ ಮತ್ತು ಉರ್ವಮಾರ್ಕೆಟ್ ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಲೇಡಿಹಿಲ್ ತನಕ ಬಂದು ಲೇಡಿಹಿಲ್ ಸರ್ಕಲ್ ನಿಲುಗಡೆ ಸ್ಥಾನದಲ್ಲಿ ನಿಲುಗಡೆಯಾವುಗುವುದು.<br><br>**<u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ</u>**<br><br>ಸಾರ್ವಜನಿಕ ಪ್ರಯಾಣಿಕರು/ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಗಳೂರು ವಿಭಾಗದ ವತಿಯಿಂದ 40 ನಗರ ಸಾರಿಗೆ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಅನುಸೂಚಿಗಳಿಂದ 416 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಮಂಗಳೂರು ನಗರ/ ಗ್ರಾಮೀಣ ಪ್ರದೇಶಗಳಿಗೆ ಹೊಸದಾಗಿ ಸಾರಿಗೆ ಸೌಲಭ್ಯ ಕಲ್ಪಿಸಲು ಪರವಾನಗಿ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರಲ್ಲಿ 40 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಈ ಎಲ್ಲಾ ಅರ್ಜಿಗಳು ಮಂಜೂರಾತಿಗೆ ಬಾಕಿಯಿರುತ್ತವೆ. |
| ಖ. | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಖಾಸಗಿ ಬಸ್ಸುಗಳ ಹಾಗೂ ಸರ್ಕಾರಿ ಬಸ್ಸುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) ಹಾಗೂ ನಗರಪಾಲಿಕೆ ವ್ಯಾಪ್ತಿಯಲ್ಲಿ ಶಕ್ತಿ ಯೋಜನೆ ಪಡೆಯಲು ವಂಚಿತರಾಗಿರುವ ಮಹಿಳೆಯರಿಗೆ ನ್ಯಾಯ ಒದಗಿಸಲು ಇಲಾಖೆ ಕೈಗೊಂಡ ಕಾರ್ಯಕ್ರಮಗಳೇನು? (ವಿವರ ನೀಡುವುದು) | **ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ**<br><br>ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರಿಂದ ಮಂಗಳೂರು ನಗರದಲ್ಲಿ ರಹದಾರಿ ಪಡೆದ ಒಟ್ಟು 59 ಸರ್ಕಾರಿ ಹಾಗೂ ಒಟ್ಟು 979 ಖಾಸಗಿ ಪ್ರವತಕರ ಬಸ್ಸುಗಳು ಸಂಚರಿಸಲಾಗುತ್ತಿದೆ. ವಿವರ ಕೆಳಕಂಡಂತಿದೆ:-<br><br>**ಮಂಜೂರಾತಿ** \| **ನಗರ** \| **ಗ್ರಾಮಾಂತರ** \| **ಒಟ್ಟು**<br>ಸರ್ಕಾರಿ \| 19 \| 40 \| 59<br>ಖಾಸಗಿ \| 321 \| 658 \| 979<br>**ಒಟ್ಟು** \| **340** \| **698** \| **1038**<br><br>**<u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ</u>**<br><br>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಗಳೂರು ವಿಭಾಗದ ವತಿಯಿಂದ 40 ನಗರ ಸಾರಿಗೆ ಅನುಸೂಚಿ/ಬಸ್ಸುಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಸರ್ಕಾರದ ಯೋಜನೆಯ ಶಕ್ತಿ ಯೋಜನೆ ಜಾರಿಗೆ ಬಂದನಂತರ ಹೆಚ್ಚಿನ/ಹೊಸ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಬೇಡಿಕೆಗಳು ಬಂದಿರುತ್ತವೆ. ಪ್ರಸ್ತುತ ಮಂಗಳೂರು ನಗರದಲ್ಲಿ ಜಿಲ್ಲಾ ದಂಡಾಧಿಕಾರಿಗಳ ಅಧಿಸೂಚನೆ ಜಾರಿಯಲ್ಲಿದ್ದು, ಸದರಿ ಅಧಿಸೂಚನೆಗೆ ವಿನಾಯಿತಿ ನೀಡಿ ನಗರ ಪ್ರದೇಶಗಳಿಗೆ ಪರವಾನಿಗೆ ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ದಿನಾಂಕ:08-08-2024ರಂದು ಹಾಗೂ ದಿನಾಂಕ:18-12-2024ರಂದು ಮನವಿಯನ್ನು ಸಲ್ಲಿಸಲಾಗಿರುತ್ತದೆ ಹಾಗೂ ಮಂಗಳೂರು ನಗರ/ ಗ್ರಾಮೀಣ ಪ್ರದೇಶಗಳಿಗೆ ಹೊಸದಾಗಿ ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಬೇಡಿಕೆಯಿರುವ 40 ಮಾರ್ಗಗಳಿಗೆ (ತಡೆಯಾಜ್ಞೆ ಇರುವ 12 ನರ್ಮ್ ಮಾರ್ಗಗಳು ಸೇರಿ) ಪರವಾನಿಗೆ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ರವರಲ್ಲಿ ಸಮಗ್ರ ಪ್ರದೇಶ ಯೋಜನೆಯಡಿಯಲ್ಲಿ ಅರ್ಜಿ ಸಲ್ಲಿಸಲಾಗಿರುತ್ತದೆ. ಈ ಎಲ್ಲಾ ಅರ್ಜಿಗಳು ಮಂಜೂರಾತಿಗೆ ಬಾಕಿಯಿರುತ್ತವೆ. |

ಸಂಖ್ಯೆ: ಟಿಡಿ 11 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಕಾರ್ಯಾಲಯ, ಮಂಗಳೂರು

REVENUE DEPARTMENT

OFFICE OF THE DEPUTY COMMISSIONER, DAKSHINA KANNADA DISTRICT, MANGALORE

No.RTA/CR/ 65 /2013-14/112800

Date : 11/09/2013

## NOTIFICATION

Whereas the then District Magistrate, DK., Mangalore in his notification No.RTA/CR.268/90-91 dated 05/01/1991 has restricted further entry and plying of City Buses to State Bank area after duly considering heavy congestion resulting in blockade of vehicles, air and noise pollution apart from lack of halting places around State Bank.

And whereas the then District Magistrate had held Road Safety Meeting and had been passed resolution on 27.11.1992 under subject No.5/92-93 to shift the Hampankatta Bus Stand. This proposal had also examined vis-à-vis the development of Hampanakatta area which is nucleus of development of city in view of establishment of commercial complexes, Government Offices, Market Complex, Railway station etc., in addition to that he had examined the traffic congestion in the Hampanakatta traffic point with reference to the report submitted by the then RTA., DK., The high vehicle population has also resulted in air and noise pollution posing health hazard. It was necessary that the situation should not further be allowed to deteriorate and if that happens the traffic would come to a stand-still in Hampanakatta signal point. Therefore the Secretary, RTA., had recommended for restriction of further entry of mofussil services including inter state and inter-regional services with fresh permits to be obtained through Hampanakatta bus stand; by issue of necessary notifications under Section 115 of the Motor Vehicles Act 1988 read with Rule 221A(5) of Karnataka Motor Vehicle (2nd Amendment) Rules, 1990.



File No. TD/11/TCQ/2025-Sec 1-Trans (Computer No. 1695538)
Generated from eOffice by Muniraja S K, TD-TD1-ASST(MSN), ASSISTANT, TRANSPORTSEC on 03/03/2025 06:00 PM

Therefore in exercise of the power, the then District Magistrate had issued notification No RTA.CR.182/1992-93 dated 06/04/1993 restricting further entry of fresh stage carriage services and has fixed four stops in the outer area to restrict the entry of fresh services. Accordingly KPT., Mallikatte, Kankanady and Ladyhill Circle were fixed as terminal points to the new stage carriage permits to be issued.

The validity of these notifications were under challenge before the Hon'ble High Court, the writ petitions were filed by Smt. Kathija and others and they were dismissed and Writ Appeals No.24-27/96 filed against the Judgment in Writ Petitions were also dismissed on 24.11.1997. The Division Bench however, has observed in the judgment that "…. *Several situations that may warrant review of the decision taken earlier and taking a fresh decision under Section 115 of the Act, may arise, and it is absolutely necessary for the District Magistrate to have such periodical review. And on such review, to either withdraw prohibition/restriction or to modify the prohibition restricted earlier imposed.* …" Hence the authorities have to take note of the situations time and again.

That the road conditions in Mangalore City has been improved, cement roads have been replaced to the earlier roads. However, the narrow road situation is still being continued. The population in Mangalore city is increased to about Five lakhs as per the 2011 Census. The increase of traffic and the population has been studied by the NITK Engineering College, Mangalore and a report is also submitted to the RTA., Mangalore. Regarding growth of registered vehicles in Mangalore city is concerned there were 69,519 vehicles as on 31.3.1993, as on 31.3.2008 these were increased to 2,48,396 and as on 31/03/2013 the vehicles were increased up to 3,89,533. This is more than Six times to the existing vehicles recorded earlier.

The Dakshina Kannada and Canara Bus Operators Association have given representations, that the earlier restrictions by fixing the stops at Kankanady, Mallikatte, may be extended further because of traffic congestion. They have requested that the stop may be fixed at pumpwell instead of Kankanady and instead of Mallikatte it may be fixed at KPT to the fresh stage carriage permits to be issued. This would ease out the traffic congestion keeping the existing stage



File No. TD/11/TCQ/2025-Sec 1-Trans (Computer No. 1695538)
Generated from eOffice by Muniraja S K, TD-TD1-ASST(MSN), ASSISTANT, TRANSPORTSEC on 03/03/2025 06:00 PM

/riage permits which have been issued and operating and the restriction may be imposed to the fresh stage carriage permits to be issued after the [illegible] notification.

The RTO., and Secretary, RTA., has submitted the report by requesting [illegible] authority to take suitable action under Section 115 of the M.V. Act 1988. In his report based on the joint route survey of police and Transport Department he has explained the road congestion and he has mentioned the number of vehicles passing through Hampanakatta Signal. According to this report which indicate that sometimes during peak hours 8.00 AM to 9 AM 276 vehicles per minute 9.00 AM to 10.00 AM 322 vehicles per minute, 10.00 AM to 11.00 AM 295 vehicles per minute, 4.00 PM to 5.00 PM 302 vehicles per minute. 5.00 PM to 6.00 PM 342 vehicles per minute and 6.00 PM to 7.00 PM 317 vehicles per minute passes through Hampankatta area. Due to this enormous increase of vehicles the Hampanakatta and State Bank areas, which are resulted in traffic congestion blockade with air and noise pollution. There is steep increase of vehicles registered at Mangalore which is Six times higher comparatively from 1992 to 2013. To ease out this, there is necessity of modification of the earlier notifications dated 5.1.1991 and 6.4.1993. The Hon'ble High Court also has held that the periodical review has to be made by the District Magistrate.

Taking note of all the situations, traffic congestion, increase of vehicles in Mangalore City. the necessity of existing services to the increased population and considering the above said circumstances I, N.Prakash, I.A.S. the District Magistrate, Dakshina Kannada District, Mangalore having examined the entire issue in detail and satisfied to modify the earlier notifications. Therefore I do hereby issue the modified notification under Section 115 of the M.V. Act 1988 read with Rule 221A (5) of the KMV Rules fixing the stops to those stage carriage permits to be issued fresh in future as hereunder :

1. The moffusil buses coming from Maravoor, Bondel, KPT are to be restricted upto KPT., and stop fixed at KPT.
2. The moffusil buses coming from Gurpur-Kulashekar shall be restricted upto Mallikatte and stop fixed at Mallikatte



File No. TD/11/TCQ/2025-Sec 1-Trans (Computer No. 1695538)
Generated from eOffice by Muniraja S K, TD-TD1-ASST(MSN), ASSISTANT, TRANSPORTSEC on 03/03/2025 06:00 PM

- The mofussil buses coming from Talapady, Ullal-K[illegible] aje, Thokkottu, Padil and Nagoori side shall be restricted upto Kankanady and stop fixed at Kankanady. Fresh services shall not be terminated or allowed to enter through Mangaladevi.
- The mofussil buses coming from Surathkal, Kuloor, Kottara shall be restricted upto Kottara Infosys stop.

The notifications issued earlier on 05/01/1991 in No. RTA.CR.268/1990-91 and dated 6.4.1993 RTA.CR.182/1992-93 are modified to the extent mentioned above. The restriction for issue of fresh stage carriage permits as mentioned above shall be applied to all types of stage carriage permits to be issued hereafter. Fresh stage carriage services shall not be allowed to enter inside city in any other roads. The existing stage carriage services operating as per the routes mentioned in the permits as on the date of this notification shall have right to be operated as per permit conditions.

However, the Inter District route permits of STU's are allowed to operate on the route Pumpwell-Kankanady-Jyothi-Bunts hostel- PVS circle- Lalbagh- KSRTC bus stand- Bejai-KPT.

- The Police Authorities is authorized to erect necessary sign boards for the Stoppage and regulation of mofussil buses having fresh permits obtained hereafter under the powers conferred under Section 116 of Karnataka Motor Vehicles Act 1988 read with Rule 221A(5) of the Karnataka Motor Vehicles Amended Rules 1990.

The notification will come into force with immediate effect and shall remain in force until further orders.

Issued under my hand and seal of this 11[th] Day of September, 2013.

District Magistrate
Dakshina Kannada District, Mangalore

To:
1) Regional Transport Officer, Mangalore for information and needful action.

This document is referred to ... Annexure ... Affidavit of ...



File No. TD/11/TCQ/2025-Sec 1-Trans (Computer No. 1695538)
Generated from eOffice by Muniraja S K, TD-TD1-ASST(MSN), ASSISTANT, TRANSPORTSEC on 03/03/2025 06:00 PM

2) Commissioner of Police, Mangalore City, Mangalore for information and needful action
3) Superintendent of Police, Dakshina Kannada, Mangalore.
4) Executive Engineer, National Highway, Mangalore.
5) Executive Engineer, P.W.D., Mangalore.
6) Commissioner, City Corporation, Mangalore.
7) Sr. Assistant Director, Information & Publicity Department, Mangalore for publication free of cost in daily news papers.
8) Deputy Police Commissioner, Mangalore Traffic
9) R.T.A. Circular File.

OFFICE OF THE DY COMMISSIONER D.K. MANGALORE

DISTRICT MAGISTRATE D.K.



File No. TD/11/TCQ/2025-Sec 1-Trans (Computer No. 1695538)
Generated from eOffice by Muniraja S K, TD-TD1-ASST(MSN), ASSISTANT, TRANSPORTSEC on 03/03/2025 06:00 PM

ಜಿಲ್ಲಾ ದಂಡಾಧಿಕಾರಿ ಹಾಗೂ ಜಿಲ್ಲಾಧಿಕಾರಿಯವರ ಕಛೇರಿ, ದ.ಕ. ಮಂಗಳೂರು.

ಪ್ರಕಟಣೆ

ಕ್ರಮಾಂಕ ಆಎಂಎ, ಸಿಆರ್ 268:90-91 ದಿನಾಂಕ 5ನೇ ಜನವರಿ 1991

ಮಂಗಳೂರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿಯವರ ಪತ್ರ ಕ್ರಮಾಂಕ ಆರ್‌ಟಿಎ.ಬಿ1-ಸಿಆರ್37,90-91 ದಿನಾಂಕ 29-8-90ರಂತೆ ಮಂಗಳೂರು ಸಾರಿಗೆ ಪ್ರಾಧಿಕಾರವು ದಿನಾಂಕ 19-5-90ರ ನಡವಳಿಯಂತೆ ಮಂಗಳೂರು ನಗರದ ಹಂಪನಕಟ್ಟೆ ಮತ್ತು ಸ್ಟೇಟ್ ಬ್ಯಾಂಕ್ ಪ್ರದೇಶದಲ್ಲಿ ಅತಿರೇಕ ವಾಹನ ಸಂಚಾರದಿಂದಾಗಿ ವಾಹನಗಳು ಅಲ್ಲಲ್ಲಿ ತಡೆಯಲ್ಪಟ್ಟು ವಾಹನಗಳು ಸರಾಗವಾಗಿ ಸಂಚರಿಸುವರೆ ಆತಂಕ ಉಂಟಾಗುವ ದೃಷ್ಟಿಯಿಂದ ಮತ್ತು ಅಪಘಾತಗಳನ್ನು ನಿವಾರಿಸುವ ಹಾಗೂ ಈ ಪ್ರದೇಶದಲ್ಲಿ ನಗರ ಸಾರಿಗೆ ವಾಹನಗಳ ನಿಲುಗಡೆ ಜಾಗದ ಕೊರತೆ ಕಾರಣ ಇರುವುದನ್ನು ಗಮನಿಸಿ ನಗರ ಸಾರಿಗೆ ವಾಹನ ಚಲನೆಯನ್ನು ನಿರ್ಬಂಧಿಸಿ ನಿಯಂತ್ರಿಸುವುದು ಪ್ರಸ್ತಾಪಿಸಿದೆ. ಮತ್ತು ದಕ್ಷಿಣ ಕನ್ನಡ ಜಿಲ್ಲಾ ಬಸ್ಸು ಮಾಲೀಕರ ಸಂಘ ಮಂಗಳೂರು ಅವರ 29ನೇ ಆಗಸ್ಟ್, 1990ರ ಪತ್ರ ಮತ್ತು ಮೋಟಾರು ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ ಮಂಗಳೂರು ಇವರ ಪತ್ರ ದಿನಾಂಕ 23-11-90ರಲ್ಲಿ ಕೂಡಾ ಈ ಕುರಿತು ಮನವಿ ಮಾಡಿಕೊಂಡಿರುವರು.

ಮೇಲಿನ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಪ್ರಸ್ತಾವನೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಬಸ್ಸು ಮಾಲೀಕರ ಸಂಘ ಮಂಗಳೂರು ಮತ್ತು ಮೋಟಾರು ಟ್ರಾನ್ಸ್‌ಪೋರ್ಟ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ ಮಂಗಳೂರು ಇವರ ಮನವಿಗಳಲ್ಲಿ ಕೋರಿರುವ ವಿಷಯಗಳನ್ನು ಕೂಲಂಕಷ ಪರಿಶೀಲಿಸಿಕೊಂಡು ಈಗ ಇರುವ ನಗರ ಸಾರಿಗೆ ವ್ಯವಸ್ಥೆ ಹಾಗೂ ಈಗ ಹಂಪನಕಟ್ಟೆ, ಎ.ಬಿ. ಸ್ಟೇಟ್ ಬ್ಯಾಂಕ್ ಪ್ರದೇಶದಲ್ಲಿ ಚಲಿಸುತ್ತಿರುವ ನಗರ ಸಾರಿಗೆ ಬಸ್ಸುಗಳ ಸಂಖ್ಯೆಯನ್ನು ಸ್ಥಳಾಂತರಿಸುವುದು ಸಾಧ್ಯವೆ, ಪ್ರಸ್ತುತದಲ್ಲಿ ಇರುವುದಾಗಿ ಮನಗಂಡಿರುವುದರಿಂದ ಮತ್ತು ಅನಾವಶ್ಯಕ ಹೆಚ್ಚಿನ ನಗರ ಸಾರಿಗೆ ಬಸ್ಸುಗಳ ಚಲಾವಣೆಗೆ ಅವಕಾಶ ಮಾಡಿಕೊಟ್ಟಲ್ಲಿ ಅನಾವಶ್ಯಕ ಹೆಚ್ಚಿನ ಪ್ರಮಾಣದಲ್ಲಿ ವಾಹನ ಸಂಚಾರ ನಿಬಿಡತೆಯುಂಟಾಗುವುದಾಗಿ ಮನಗಂಡಿರುವುದರಿಂದ ಈ ಪ್ರದೇಶದಲ್ಲಿ ಇಂತಹ ಆತಂಕಕರ ಪರಿಸ್ಥಿತಿಯು ಉದ್ಭವಿಸದಂತೆ ತಡೆಗಟ್ಟುವ ದೃಷ್ಟಿಯಿಂದ ಮತ್ತು ಸಾರ್ವಜನಿಕರ ಭದ್ರತೆಯ ದೃಷ್ಟಿಯಿಂದಲೂ ಹಂಪನಕಟ್ಟಾ ಮತ್ತು ಸ್ಟೇಟ್ ಬ್ಯಾಂಕ್ ಪ್ರದೇಶದಲ್ಲಿ ಇನ್ನು ಮುಂದೆ ಹೊಸತಾಗಿ ನೀಡಲಾಗುವ ಪರ್ಮಿಟುಗಳಿಗೆ ಸಂಬಂಧಪಟ್ಟ ನಗರ ಸಾರಿಗೆ ಬಸ್ಸುಗಳ ಚಲನೆ ಹಾಗೂ ನಿಲುಗಡೆಯನ್ನು ನಿರ್ಬಂಧಿಸಿ ನಿಯಂತ್ರಿಸಬೇಕೆಂದು ನಾನು ಮನಗಂಡಿದ್ದೇನೆ.

ಆದ್ದರಿಂದ ಮೋಟಾರು ವಾಹನ ಕಾಯಿದೆ 1988ರ ಕಲಂ 115 ಮತ್ತು ಕರ್ನಾಟಕ ಮೋಟಾರು ವಾಹನ (ಎರಡನೇ ತಿದ್ದುಪಡಿ) ನಿಯಮಾವಳಿ 1990ರ ನಿಯಮ 221ಎ(5)ರಲ್ಲಿ ದತ್ತವಾದ ಅಧಿಕಾರದಂತೆ ಕೆ.ಪಿ.ಕೃಷ್ಣನ್ ಜಿಲ್ಲಾ ದಂಡಾಧಿಕಾರಿ, ದ.ಕ. ಮಂಗಳೂರು ಆದ ನಾನು ಇನ್ನು ಮುಂದೆ ಹೊಸತಾಗಿ ನೀಡಲಾಗುವ ಪರ್ಮಿಟುಗಳ ಹೊಂದಿರುವ ನಗರ ಸಾರಿಗೆ ಬಸ್ಸುಗಳ ಚಲನೆಯನ್ನು ನಿರ್ಬಂಧಿಸಿ ಮತ್ತು ಮೋಟಾರು ವಾಹನ ಕಾಯಿದೆ 1988ರ ಕಲಂ 117 ಮತ್ತು ಕರ್ನಾಟಕ ಮೋಟಾರು ವಾಹನ ತಿದ್ದುಪಡಿ ನಿಯಮಾವಳಿ 1990 ರ ನಿಯಮ 221ಎ(6)ರನ್ವಯ ಅವುಗಳ ನಿಲುಗಡೆ ಸ್ಥಳವನ್ನು ಈ ಕೆಳಗಿನಂತೆ ನಿಗದಿಪಡಿಸಿ ಆದೇಶಿಸಿದ್ದೇನೆ.

1. ಪಂಪ್‌ವೆಲ್, ಬೆಂದೂರ್‌ವೆಲ್, ಕೆ.ಪಿ.ಟಿ. ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಕೆ.ಎಸ್.ಆರ್.ಟಿ.ಸಿ. ತನಕ ಬಂದು ಕೆ.ಎಸ್.ಆರ್.ಟಿ.ಸಿ.ಯಲ್ಲಿ ನಿಲುಗಡೆಯಾಗುವುದು.
2. ಗುರುಪುರ, ಕುಲಶೇಖರ ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಮಲ್ಲಿಕಟ್ಟೆ ತನಕ ಬಂದು ಮಲ್ಲಿಕಟ್ಟೆ ಸರ್ಕಲ್‌ನಲ್ಲಿ ನಿಲುಗಡೆಯಾಗುವುದು.
3. ತಲಪಾಡಿ-ಉಳ್ಳಾಲ, ಕೋಟೆಕಾರ್, ಕುತ್ತಾರು, ಪಡೀಲ್ ಮತ್ತು ನಂತೂರು ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಕಂಕನಾಡಿ ತನಕ ಬಂದು ಕಂಕನಾಡಿಯಲ್ಲಿ ನಿಲುಗಡೆಯಾಗುವುದು.
4. ಸುರತ್ಕಲ್, ಕಾವೂರು, ಕೂಳೂರು, ಬಜ್ಪೆ ಮತ್ತು ಉರ್ವ ಮಾರ್ಕೆಟ್ ಕಡೆಯಿಂದ ಬರುವ ನಗರ ಸಾರಿಗೆ ಬಸ್ಸುಗಳು ಲೇಡಿಹಿಲ್ ತನಕ ಬಂದು ಲೇಡಿಹಿಲ್ ಸರ್ಕಲ್ ನಿಲುಗಡೆ ಸ್ಥಳದಲ್ಲಿ ನಿಲುಗಡೆಯಾಗುವುದು.

...2



File No. TD/11/TCQ/2025-Sec 1-Trans (Computer No. 1695538)
Generated from eOffice by Muniraja S K, TD-TD1-ASST(MSN), ASSISTANT, TRANSPORTSEC on 03/03/2025 06:00 PM

ಅಲ್ಲದೆ ನಗರ ಸಾರಿಗೆ ಬಸ್ಸುಗಳು ಈ ಮೇಲೆ ಕಾಣಿಸಿರುವ ಕ್ರಮಾಂಕ 1 ರಿಂದ 4ರವರೆಗೆ ಹೇಳಿದ ಕಡೆಗಳಿಂದ ಅಲ್ಲದೇ ಬೇರೆ ಯಾವುದೇ ಕಡೆಯಿಂದ ಹಂಪನಕಟ್ಟೆ ಮತ್ತು ಸ್ಟೇಟ್ ಬ್ಯಾಂಕ್ ನಿಲ್ದಾಣವನ್ನು ಪ್ರವೇಶಿಸಿ ಹೊರಡುವುದನ್ನು ಕಡ್ಡಾಯವಾಗಿ ಈ ಮೂಲಕ ನಿರ್ಬಂಧಿಸಿದೆ.

ಮೇಲೆ ಹೇಳಿದ ನಿರ್ಬಂಧವು ಸಿಂಡಿಕೇಟ್ ಬ್ಯಾಂಕ್ ವೃತ್ತದ ಕಡೆಯಿಂದ ಹಂಪನಕಟ್ಟೆ ಕಡೆಗೆ ಬರುವ ನಗರ ಸಾರಿಗೆ ಬಸ್ಸುಗಳಿಗೆ ಮಾತ್ರ ಅನ್ವಯಿಸುವುದಲ್ಲದೆ, ಇತರ ಕಡೆಯಿಂದ ಹಂಪನಕಟ್ಟೆ ಕಡೆಗೆ ಬರುವ ನಗರ ಸಾರಿಗೆ ಬಸ್ಸುಗಳಿಗೆ ಅನ್ವಯಿಸುವುದಿಲ್ಲ.

ಗ್ರಾಮಾಂತರ ಸಾರಿಗೆ ಬಸ್ಸುಗಳು ಹಂಪನಕಟ್ಟೆಯಲ್ಲಿ ಮಿನಿ ವಿಧಾನಸೌಧದ ಮುಂದೆ ಮತ್ತು ಸ್ಟೇಟ್ ಬ್ಯಾಂಕಿನ ಕಡೆ ಸಂಚರಿಸುತ್ತಿರುವುದರಿಂದ ಗ್ರಾಮಾಂತರ ಸಾರಿಗೆ ಬಸ್ಸುಗಳಿಗೆ ಈ ನಿರ್ಬಂಧ ಅನ್ವಯಿಸುವುದಿಲ್ಲ.

ಮೋಟಾರು ವಾಹನ ಕಾಯ್ದೆ 1988ರ ಕಲಂ 116 ಮತ್ತು ಕರ್ನಾಟಕ ಮೋಟಾರು ವಾಹನ (2ನೇ ತಿದ್ದುಪಡಿ) ನಿಯಮಗಳು 1990ರ ನಿಯಮ 221ಎ(2)ರಂತೆ ಜಿಲ್ಲಾ ಮ್ಯಾಜಿಸ್ಟ್ರೇಟರು, ದಕ್ಷಿಣ ಕನ್ನಡ ಮಂಗಳೂರು ಇವರಿಗೆ ನಗರ ಸಾರಿಗೆ ಬಸ್ಸು ನಿಲ್ದಾಣ, ಸಾರಿಗೆ ವ್ಯವಸ್ಥೆ ಬಗ್ಗೆ, ಅವಶ್ಯಕ ಸೂಚನಾ ಫಲಕಗಳನ್ನು ಸ್ಥಾಪಿಸಲು ಅಧಿಕಾರ ನೀಡಿದೆ.

ಈ ಪ್ರಕರಣದಂತೆ ಹೊರಡಿಸಲಾದ ಈ ಆದೇಶವು ಈ ಕೂಡಲೇ ಜಾರಿಗೆ ಬರುವುದು ಮತ್ತು ಮುಂದಿನ ಆದೇಶದ ತನಕ ಜಾರಿಯಲ್ಲಿರುವುದು.

ನನ್ನ ಸ್ವಹಸ್ತದಿಂದ ಮೊಹರಿನೊಂದಿಗೆ 1990ನೇ ಇಸವಿ ಡಿಸೆಂಬರ ತಿಂಗಳ ದಿನಾಂಕ 8 ರಂದು ಹೊರಡಿಸಲಾಗಿದೆ.

(ಸಹಿ) ಜಿಲ್ಲಾ ದಂಡಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿ
ದಕ್ಷಿಣ ಕನ್ನಡ, ಮಂಗಳೂರು.

158—50 ಬ·ಪ್ರ·ಕರಾಪ·ಭಾಗ9—ಎ:ಜನವರಿ 24, 1991

ಸಹಿ—
ಕಾರ್ಯದರ್ಶಿ,
ಪ್ರಾದೇಶಿಕ ಸಾರಿಗೆ ಪ್ರಾಧಿಕಾರ,
ಮಂಗಳೂರು ದ·ಕ·



File No. TD/11/TCQ/2025-Sec 1-Trans (Computer No. 1695538)
Generated from eOffice by Muniraja S K, TD-TD1-ASST(MSN), ASSISTANT, TRANSPORTSEC on 03/03/2025 06:00 PM

NO.R.T.A.CR 182/92-93 DATED: 06-04-1993

## NOTIFICATION

Whereas the District Magistrate, D.K., Mangalore in his notification No. RTA CR 268/90-91 dated 6-12-1990 has restricted further entry and plying of City Buses to Hampankatta and State Bank Areas on account of fresh permits obtained from that date, duly considering heavy congestion resulting in blockade of vehicles for a considerable time, air and noise pollution apart from lack of halting places around State Bank and Hampankatta areas.

And whereas during the currency of the aforesaid notification,representation of Canara Bus operators Association Udupi dated 6-7-92 requesting for restricting entry of buses to Hampankatta area is received and the contents have been examined by the District Level Road Safety Committee and resolution has been passed on 27-11-1992 under subject No.5/92-93 to shift the Hampankatta Bus Stand. This proposal has also been examined vis-a-vis the development of Hampankatta area which is nucleus of development of city in terms of establishment of commercial complexes, Govt. offices, market complex etc., in addition to being the mofussil bus stand. The Secretary Regional Transport Authority, Mangalore has been directed to conduct a survey of the vehicular traffic at



File No. TD/11/TCQ/2025-Sec 1-Trans (Computer No. 1695538)
Generated from eOffice by Muniraja S K, TD-TD1-ASST(MSN), ASSISTANT, TRANSPORTSEC on 03/03/2025 06:00 PM

Hampankatta point and nearby. The Secretary, Regional Transport Authority has since reported on 13-09-1992 the details of the traffic movements in Hampankatta based on the survey. He has reported that during the peak hours about 156 vehicles/minute (between 9 AM to 10 AM), 147 vehicles/minutes (between 10 AM to 11 AM) and 141 vehicles/minute (between 11AM to 12noon) pass the Hampankatta Traffic; out of this, about 13 are buses. In the Traffic signal point which is manually operated it takes atleast 4 minutes to change Traffic signal normally, resulting in heavy traffic congestion at any point of time. The roads nearby the signal point are not enough to hold this kind of heavy traffic. The Secretary ,R.T.A. has also reported on 26-03-1993 that at present there are 1506 bus trips on the basis of 374 permits operating to Hampankatta Busstand from mofussil centres and that under 206 city bus permits, 2002 bus trips are touching Hampankatta everyday. During peak hours the Hampankatta signal point witnesses heavy traffic movement resulting in traffic congestion. It is also known that a number of registration oi vehicles increase at a rate of 9% presently. The congestion has resulted in blocking of traffic to the nearby Wenlock Hospital too. The high vehicle population has also resulted in air and noise pollution posing health hazard. The proposal of shifting of busstand

for which City Muncipal Corporation has taken a decision in 1990 is however taking time for implementation. It is now necessary that the situation cannot any further be allowed to deteriorate and if that happens the traffic will come to a stand-still in Hampankatta signal point. Therefore the Secretary ,R.T.A., has recommended for restriction of further entry of mofussil service including interstate and inter-regional services with fresh permits obtained hereafter to Hampankatta bus stand by issue of necessary notification under section 115 of the Motor Vehicles Act 1988 read with rule 221 A(5) of Karnataka Motor Vehicle (2nd Amendment) Rules,1990.

Now therefore in exercise of powers conferred under Section 115 of the Karnataka Motor Vehicle Act 1988 read with rule 221 A (5) of Motor Vehicles (2nd Amendment) rule 1990, I, Sri V. Madhu, District Magistrate, Dakshina Kannada District, Mangalore having examined the entire issue in detail in the background of above, am satisfied that it is absolutely necessary to impose some restrictions now itself so as to obviate further traffic congestion in the Hampankatta signal point area and nearby, do hereby restrict the entry of mofussil buses with fresh permits obtained hereafter to Hampankatta and State Bank areas, I also hereby fix the stops of those mofussil buses for which permits are to be granted in future as mentioned here under.



File No. TD/11/TCQ/2025-Sec 1-Trans (Computer No. 1695538)
Generated from eOffice by Muniraja S K, TD-TD1-ASST(MSN), ASSISTANT, TRANSPORTSEC on 03/03/2025 06:00 PM

1. The mofussil buses coming from Maravoor Kondel, KPT to be restricted upto KPT and stop fixed near KPT.

2. The mofussil buses coming from Gurpur-Kulashekar shall be restricted upto Kadri Mallikatta and stop fixed at Mallikatta.

3. The mofussil buses coming from Talapady-Ullal-Konaje-Thokkottu, Padil and Nagoori side shall be restricted upto Kankanady and stop fixed at Kankanady.

4. The mofussil buses coming from Surathkal, Kuloor, Kottara, Urva Stores and Urva Market shall be restricted upto Lady Hill circle.

The Superintendent of Police D.K., Mangalore is authorised to erect necessary sign boards for the stoppage and regulation of mofussil buses having fresh permits obtained hereafter under the powers conferred on me under Section 116 of Karnataka Motor Vehicles Act 1988 read with rule 221 A(2) of the Karnataka Motor Vehicles (IInd Amendment) Rules 1990.

This notification will come into force with immediate effect and shall remain in force until further orders.

Issued under my hand and seal of this 6th Day of April 1993.

(V. MADHAV)
DISTRICT MAGISTRATE, D.K.,
MANGALORE

Printed by the Director of Printing, Stationery ...



File No. TD/11/TCQ/2025-Sec 1-Trans (Computer No. 1695538)
Generated from eOffice by Muniraja S K, TD-TD1-ASST(MSN), ASSISTANT, TRANSPORTSEC on 03/03/2025 06:00 PM